# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 146 | Pages. 2 | Date: 15-05-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 146 - ಪುಟಗಳು : 2 | 15-05-2026 | ಶುಕ್ರವಾರ | Ph: 8762954248 | ದರ : ₹1


# 15 ದಿನಗಳ ಒಳಗೆ ಫಲಾನುಭವಿಗಳಿಗೆ ಖಾತೆ

## ಜಿಲ್ಲಾಧಿಕಾರಿ ಲತಾಕುಮಾರಿ ಭರವಸೆ | ನಿರಂತರ ಹೋರಾಟಕ್ಕೆ ಸಂದ ಜಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಬೀರನಹಳ್ಳಿ ಕೆರೆ ಹಾಗೂ ಅರಕಲಗೂಡು ತಾಲ್ಲೂಕಿನ ಅಬ್ಬೂರು ಮಾಚಗೌಡನಹಳ್ಳಿಯಲ್ಲಿ ಹಕ್ಕುಪತ್ರ ಇದ್ದರೂ ಖಾತೆ ಮಾಡಿಸಿಕೊಳ್ಳಲಾಗದ ಫಲಾನುಭವಿಗಳ ಸಮಸ್ಯೆಯನ್ನು 15 ದಿನಗಳ ಒಳಗೆ ಬಗೆಹರಿಸುವುದಾಗಿ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಭರವಸೆ ನೀಡಿದ್ದಾರೆ.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಂತ್ರಸ್ತರ ಪರವಾಗಿ ರೈತ ಮುಖಂಡರು ಹಾಗೂ ಅಧಿಕಾರಿಗಳೊಂದಿಗೆ ನಡೆದ ವಿಡಿಯೋ ಸಂವಾದದಲ್ಲಿ ಈ ಭರವಸೆ ಸಿಕ್ಕಿದೆ.

ರೈತ ಸಂಘದ ಜಿಲ್ಲಾಧ್ಯಕ್ಷ ಬಾಬು ಮಾತನಾಡಿ, 2007ರಲ್ಲಿ ನಗರದ ರಾಘವೇಂದ್ರ ಕಾಲೋನಿ ವ್ಯಾಪ್ತಿಯ ಬೀರನಹಳ್ಳಿ ಕೆರೆ ಪ್ರದೇಶದಲ್ಲಿ ವಾಸವಾಗಿದ್ದ ಸುಮಾರು 73 ಕುಟುಂಬಗಳನ್ನು ತೆರವುಗೊಳಿಸಲಾಗಿತ್ತು. ಆಗ ಆಶ್ರಯ ಯೋಜನೆಯಡಿ ಕೃಷ್ಣಾನಗರ ಪ್ರದೇಶದಲ್ಲಿ ನಿವೇಶನ ನೀಡುವುದಾಗಿ ಭರವಸೆ ನೀಡಲಾಗಿತ್ತು. ಆದರೆ 18 ವರ್ಷ ಕಳೆದರೂ ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ನಿವೇಶನ ಹಂಚದ ಕಾರಣ, ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಅನೇಕರು ಬಾಡಿಗೆ ಮನೆಗಳಲ್ಲಿ ಜೀವನ ಸಾಗಿಸುತ್ತಿದ್ದು, ಕೆಲವರು ತಾತ್ಕಾಲಿಕ ಶೆಡ್‌ಗಳಲ್ಲಿ ನೆಲೆಸಿದ್ದಾರೆ ಎಂದು ವಿವರಿಸಿದರು.

ಸಮಸ್ಯೆ ಪರಿಹರಿಸುವಂತೆ ಹಲವು ವರ್ಷಗಳಿಂದ ನಾನಾ ಸಂಘಟನೆಗಳು, ಸ್ಥಳೀಯರು ಹಾಗೂ ಸಂತ್ರಸ್ತರು ಅನೇಕ ಬಾರಿ ಪ್ರತಿಭಟನೆ ಮಾಡಿದ್ದರೂ ಪರಿಹಾರ ಸಿಕ್ಕಿಲ್ಲ. ಇದೀಗ ಕೆ.ಎಸ್. ಲತಾಕುಮಾರಿ ಅವರ ಗಮನಕ್ಕೆ ತಂದಾಗ ಅವರು ತಕ್ಷಣ ಸಂಬಂಧಿಸಿದ ಅಧಿಕಾರಿಗಳ ಸಭೆ ಕರೆದು ವಾಸ್ತವ ಸ್ಥಿತಿ ಪರಿಶೀಲನೆ ನಡೆಸಿದ್ದಾರೆ. ಸಭೆಯಲ್ಲಿ ಎಲ್ಲವನ್ನೂ ಪರಿಶೀಲಿಸಿರುವ ಡಿಸಿ ಅವರು, ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ತ್ವರಿತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ. 15 ದಿನಗಳೊಳಗೆ ಸಮಸ್ಯೆ ಬಗೆಹರಿಸುವ ಭರವಸೆ ಡಿಸಿ ಅವರಿಂದ ಸಿಕ್ಕಿದೆ ಎಂದು ರೈತ ಮುಖಂಡರು ಮಾಹಿತಿ ನೀಡಿದರು.

ಹಾಗೆಯೇ ಅಬ್ಬೂರು ಮಾಚಗೌಡನಹಳ್ಳಿಯಲ್ಲೂ ಇದೇ ರೀತಿಯ ಸಮಸ್ಯೆ ಎದುರಾಗಿದ್ದು, ಅಲ್ಲೂ ಕೂಡ ಹಕ್ಕುಪತ್ರ ಪಡೆದ ಹಲವು ಕುಟುಂಬಗಳು ನಿವೇಶನಕ್ಕಾಗಿ ಕಾಯುತ್ತಿವೆ. ಕಟ್ಟಿದ್ದ ಮನೆಗಳನ್ನು ತೆರವುಗೊಳಿಸಲಾಗಿದೆ.

ಈ ವಿಚಾರವನ್ನೂ ಸಭೆಯಲ್ಲಿ ಪ್ರಸ್ತಾಪಿಸಲಾಗಿದ್ದು, ಸಮಸ್ಯೆಯನ್ನು ಜಿಲ್ಲಾಧಿಕಾರಿಗಳು ಗಂಭೀರವಾಗಿ ಪರಿಗಣಿಸಿದ್ದಾರೆ. ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಅಗತ್ಯ ದಾಖಲೆ ಪರಿಶೀಲಿಸಿ ಶೀಘ್ರ ಪರಿಹಾರ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದು ತಿಳಿದುಬಂದಿದೆ.

ಇದರಿಂದಾಗಿ ವರ್ಷಗಳ ಕಾಲ ಅನಿಶ್ಚಿತತೆಯಲ್ಲಿ ಬದುಕುತ್ತಿದ್ದ ಕುಟುಂಬಗಳಿಗೆ ಜಿಲ್ಲಾಡಳಿತದ ಈ ಭರವಸೆ ಹೊಸ ನಿರೀಕ್ಷೆ ಮೂಡಿಸಿದೆ. ಸರ್ಕಾರ ನೀಡಿದ ಹಕ್ಕುಪತ್ರಕ್ಕೆ ಅರ್ಥ ಸಿಗಬೇಕು. ನಮ್ಮ ಮಕ್ಕಳಿಗೆ ಶಾಶ್ವತ ನೆಲೆ ಸಿಗಬೇಕು ಎಂಬುದು ಫಲಾನುಭವಿಗಳ ಆಶಯವಾಗಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಅವರು ಮಧ್ಯ ಪ್ರವೇಶದಿಂದ ದೀರ್ಘಕಾಲದ ಸಮಸ್ಯೆಗೆ ಅಂತ್ಯ ಸಿಗುವ ವಿಶ್ವಾಸ ವ್ಯಕ್ತವಾಗಿದ್ದು, ಮುಂದಿನ ದಿನಗಳಲ್ಲಿ ನಿವೇಶನ ಹಂಚಿಕೆ ಪ್ರಕ್ರಿಯೆ ವೇಗ ಪಡೆಯುವ ನಿರೀಕ್ಷೆ ಮೂಡಿದೆ.

ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ವಿಠಲ, ತಾಲೂಕು ಅಧ್ಯಕ್ಷ ಗಂಗಾಧರ್, ಅಶೋಕ್, ಪುಟ್ಟರಾಜು, ಕಾಳಕ್ಕ, ಪವಿತ್ರ, ಪುಟ್ಟಸ್ವಾಮಿ, ಅಕ್ಮಲ್ ಪಾಷ, ಕಾಂತರಾಜು ಇದ್ದರು.

## ಹಿಜಾಬ್‌ಗೆ ಅವಕಾಶ ಶ್ರೀರಾಮ ಸೇನೆ ಪ್ರತಿಭಟನೆ

ರಾಜ್ಯದ ಎಲ್ಲಾ ಸರ್ಕಾರಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ಮಾಡಿಕೊಟ್ಟಿರುವ ರಾಜ್ಯ ಸರ್ಕಾರ ತನ್ನ ಆದೇಶವನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿ ಶ್ರೀರಾಮಸೇನೆ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.



ಶ್ರೀರಾಮ ಸೇನೆ ರಾಜ್ಯ ಉಪಾಧ್ಯಕ್ಷ ಜಾನಕೆರೆ ಹೇಮಂತ್ ಮಾತನಾಡಿ, ರಾಜ್ಯ ಸರ್ಕಾರ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್‌ಗೆ ಅನುಮತಿ ನೀಡಿರುವುದು ಖಂಡನೀಯ. 2022ರಲ್ಲಿ ಹೈಕೋರ್ಟ್ ಹಿಜಾಬ್ ಸಮವಸ್ತ್ರದ ಅವಿಭಾಜ್ಯ ಭಾಗವಲ್ಲವೆಂದು ಸ್ಪಷ್ಟ ತೀರ್ಪು ನೀಡಿದೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೆ ಹಿಜಾಬ್‌ಗೆ ಅನುಮತಿ ನೀಡಲು ಮುಂದಾಗಿರುವುದು ನ್ಯಾಯಾಂಗದ ತೀರ್ಪಿನ ಆಶಯಕ್ಕೆ ವಿರುದ್ಧವಾಗಿದೆ ಎಂದರು.

ಶಾಲಾ-ಕಾಲೇಜುಗಳ ಸಮವಸ್ತ್ರ ಹಾಗೂ ಶಿಸ್ತು ಕುರಿತು ನಿರ್ಧಾರ ಕೈಗೊಳ್ಳುವ ಅಧಿಕಾರ ಆಯಾ ಶಾಲಾ-ಕಾಲೇಜು ಶಾಲಾಭಿವೃದ್ಧಿ ಸಮಿತಿ ಹಾಗೂ ಸಂಬಂಧಿತ ಸಂಸ್ಥೆಗಳ ಸಮಿತಿಗಳಿಗೆ ಅಧಿಕಾರ ಇದೆ. ಸರ್ಕಾರದ ಈಗಿನ ನಡೆ ಸಮಿತಿಗಳ ಹಕ್ಕನ್ನು ಕಸಿದುಕೊಳ್ಳುವಂತಾಗಿದೆ. ಹಾಗೂ ಕೇವಲ ಮುಸ್ಲಿಂ ತುಷ್ಟೀಕರಣದ ರಾಜಕೀಯ ಉದ್ದೇಶದಿಂದಲೇ ಹಿಜಾಬ್‌ಗೆ ಅನುಮತಿ ನೀಡುವ ಪ್ರಯತ್ನ ನಡೆಯುತ್ತಿದೆ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ವಿದ್ಯಾರ್ಥಿಗಳಲ್ಲಿ ಧರ್ಮ, ಜಾತಿ ಹಾಗು ಆರ್ಥಿಕ ಭೇದ ಭಾವ ಕಾಣಿಸಬಾರದು ಎಂಬ ಉದ್ದೇಶದಿಂದ ಸಮವಸ್ತ್ರ ವ್ಯವಸ್ಥೆ ಜಾರಿಗೆ ತಂದಿದ್ದರು. ಸಮವಸ್ತ್ರದ ಮೂಲ ಉದ್ದೇಶವೇ ವಿದ್ಯಾರ್ಥಿಗಳಲ್ಲಿ ಸಮಾನತೆ ಮತ್ತು ಏಕತೆಯನ್ನು ನಿರ್ಮಿಸುವುದಾಗಿದೆ. ಇದೀಗ ಕೆಲವು ವಲಯಗಳು ಶಿವಧಾರ, ಜನಿವಾರ, ರುದ್ರಾಕ್ಷಿ ಮುಂತಾದವುಗಳನ್ನು ಹಿಜಾಬ್ ವಿಚಾರಕ್ಕೆ ಅನವಶ್ಯಕವಾಗಿ ಜೋಡಿಸಿ ಹಿಂದೂ ಸಮಾಜದ ದಿಕ್ಕು ತಪ್ಪಿಸುವ ಕಾರ್ಯ ಮಾಡುತ್ತಿವೆ. ಶಿವಧಾರ, ಜನಿವಾರ, ರುದ್ರಾಕ್ಷಿ ಇತ್ಯಾದಿಗಳು ಬಟ್ಟೆಯ ಒಳಭಾಗದಲ್ಲಿ ಧರಿಸಲಾಗುವ ವೈಯಕ್ತಿಕ ಆಚರಣೆಗಳಾಗಿದ್ದು, ಅವುಗಳಿಗೆ ಸಮವಸ್ತ್ರದ ಹೊರಾಂಗಣ ನಿಯಮಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರು.

ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು, ಹಿಜಾಬ್‌ಗೆ ಅನುಮತಿ ನೀಡುವ ಯಾವುದೇ ಕ್ರಮ ಕೈಗೊಳ್ಳಬಾರದೆಂದು ಒತ್ತಾಯಿಸಿದರು. ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಧರ್ಮಾನಾಯಕ್ ಮೊದಲಾದವರಿದ್ದರು.

## ಅರಸೀಕೆರೆಯಲ್ಲಿ ಕರಿಯಮ್ಮ-ಮಲ್ಲಿಗೆಮ್ಮ ರಥೋತ್ಸವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ನಗರದ ಗ್ರಾಮ ದೇವತೆಯರಾದ ಕರಿಯಮ್ಮ ಮತ್ತು ಮಲ್ಲಿಗೆಮ್ಮ ದೇವಿಯರ 57ನೇ ವರ್ಷದ ಮಹಾರಥೋತ್ಸವ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ವೈಭವದಿಂದ ಜರುಗಿತು.

ರಥೋತ್ಸವಕ್ಕೂ ಮುನ್ನ ಶೃಂಗರಿಸಿದ್ದ ರಥದ ಮೇಲೆ ಪುಷ್ಪಾಲಂಕಾರದೊಂದಿಗೆ ಕಂಗೊಳಿಸುತ್ತಿದ್ದ ಕರಿಯಮ್ಮ ಮತ್ತು ಮಲ್ಲಿಗೆಮ್ಮ ದೇವಿಯರ ಉತ್ಸವ ಮೂರ್ತಿಯನ್ನು ರಥದ ಮೇಲೆ ಪ್ರತಿಷ್ಠಾಪಿಸಿ ಮಹಾ ಮಂಗಳಾರತಿ ಬೆಳಗುತ್ತಿದ್ದಂತೆ ಈ ಶುಭ ಘಳಿಗೆಗಾಗಿ ಕಾಯುತ್ತಿದ್ದ ಭಕ್ತರ ದಂಡು ಗ್ರಾಮ ದೇವತೆಯರ ನಾಮಸ್ಮರಣೆ ಮಾಡುತ್ತ ರಥ ಎಳೆದು ಪುನೀತರಾದರು.

ಗ್ರಾಮ ದೇವತೆಯ ರಥೋತ್ಸವವಾಗಿರುವುದರಿಂದ ಸಹಜವಾಗಿಯೇ ನಗರದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರಲ್ಲದೆ ನೂತನ ವಧು ವರರು ಹಾಗೂ ಮದುವೆಯಾಗಿ ಹೊರ ಊರಿಗೆ ಹೋಗಿದ್ದ ಹೆಣ್ಣು ಮಕ್ಕಳು ಪಾಲ್ಗೊಂಡು ಗ್ರಾಮ ದೇವತೆಯರ ದರ್ಶನ ಮಾಡಿದರೆ ಮನದ ಇಷ್ಟಾರ್ಥಗಳು ಈಡೇರುತ್ತವೆ ಎಂಬ ನಂಬಿಕೆ ಭಕ್ತರಲ್ಲಿ ಇರುವುದರಿಂದ ಸಹಜವಾಗಿಯೇ ಹೆಚ್ಚಿನ ಸಂಖ್ಯೆಯಲ್ಲಿ ನೂತನ ವಧು-ವರರು ಹಾಗೂ ಮಹಿಳಾ ಭಕ್ತರು ಜಾತ್ರಾ ಮಹೋತ್ಸವದಲ್ಲಿ ಕಾಣುವುದು ವಿಶೇಷ.

ಶಾಸಕ ಕೆ.ಎಂ.ಶಿವಲಿಂಗೇಗೌಡ, ಗ್ಯಾರಂಟಿ ಯೋಜನೆಗಳ ತಾಲೂಕು ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಶೇಖರ್, ಗ್ರಾಮ ದೇವತೆ ಕರಿಯಮ್ಮ ಮತ್ತು ಮಲ್ಲಿಗೆಮ್ಮ ದೇವಸ್ಥಾನದ ಅಭಿವೃದ್ಧಿ ಸಮಿತಿಯ ಪ್ರಮುಖರು ಉಪಸ್ಥಿತರಿದ್ದರು.

ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತಾದಿಗಳಿಗೆ ಹರಕೆ ಹೊತ್ತಿದ್ದ ಭಕ್ತರು ಪಾನಕ ಫಲಾಹಾರವನ್ನು ವಿತರಿಸುವ ಮೂಲಕ ತಮ್ಮ ಹರಕೆ ತೀರಿಸಿದರು. ದೇವಸ್ಥಾನದ ಅಭಿವೃದ್ಧಿ ಸಮಿತಿ ವತಿಯಿಂದ ರಥೋತ್ಸವದಲ್ಲಿ ಪಾಲ್ಗೊಂಡ ಭಕ್ತಾದಿಗಳಿಗೆ ಪ್ರತಿವರ್ಷದಂತೆ ಈ ವರ್ಷವೂ ಸಹ ಸಾಮೂಹಿಕ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

## ಸೂರ್ಯೋದಯ ಬ್ಯಾಂಕ್ ವ್ಯವಸ್ಥಾಪಕಿ ಬಂಧನಕ್ಕೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಸುರ್ಯೋದಯ ಬ್ಯಾಂಕ್‌ನ ವ್ಯವಸ್ಥಾಪಕಿ ಹೆಚ್.ಎಸ್.ಪೂಜಾ ಎಂಬುವವರು 6 ಕೋಟಿ ರೂ. ವಂಚಿಸಿದ್ದು, ಎಫ್‌ಐಆರ್ ದಾಖಲಾಗಿದ್ದರೂ, ಆಕೆಯ ಬಂಧನಕ್ಕೆ ಪೊಲೀಸರು ನಿರ್ಲಕ್ಷ್ಯ ವಹಿಸಿದ್ದಾರೆ. ಕೂಡಲೇ ಆಕೆಯನ್ನು ಬಂಧಿಸಿ ನ್ಯಾಯ ದೊರಕಿಸಿಕೊಡಬೇಕೆಂದು ಸಂತ್ರಸ್ತರ ಪರವಾಗಿ ಎಸ್.ಬಿ.ವಿಶ್ವಾಸ್ ಆಗ್ರಹಿಸಿದರು.




ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 63 ಗ್ರಾಹಕರು, 2 ಲಕ್ಷ, ಮೂರು ಲಕ್ಷ, ಐದು ಲಕ್ಷ ರೂ. ಹೀಗೆ ಬರೋಬ್ಬರಿ 6 ಕೋಟಿ ರೂ. ಕಳೆದುಕೊಂಡಿದ್ದಾರೆ. ಎಲ್ಲರಿಗೂ ಕೃಷಿ ಮಾಡಲು, ಕುಕ್ಕುಟ ಇತ್ಯಾದಿ ಉದ್ಯಮ ಆರಂಭಿಸಲು 50 ಲಕ್ಷ ರೂ. ಲೋನ್ ಕೊಡಿಸುವೆ. ಇದರಲ್ಲಿ 10 ರಿಂದ 20 ಲಕ್ಷ ಸಬ್ಸಿಡಿ ಸಹ ಸಿಗಲಿದೆ ಎಂದು ನಂಬಿಸಿದ್ದಳು. ನನಗೆ ನೀವು ಇಷ್ಟು ಲಂಚ ಕೊಡಬೇಕು ಎಂದು ಕೇಳಿ ತನ್ನ ಅಕೌಂಟ್‌ಗೆ ಹಣ ಹಾಕಿಸಿಕೊಂಡಿದ್ದಳು ಎಂದು ದೂರಿದರು.

ಈ ಬಗ್ಗೆ ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಎಫ್‌ಐಆರ್ ಸಹ ದಾಖಲಾಗಿದೆ. ಇದಾಗಿ 2 ತಿಂಗಳು ಕಳೆದಿದ್ದರೂ, ತನಿಖೆಯಲ್ಲಿ ಯಾವುದೇ ಪ್ರಗತಿ ಆಗಿಲ್ಲ. ಆರೋಪಿ ಬಂಧನಕ್ಕೆ ಕ್ರಮ ಕೈಗೊಳ್ಳುವ ಬದಲು ಆಕೆಗೆ ರಕ್ಷಣೆ ನೀಡಲಾಗುತ್ತಿದೆ ಎಂದು ಅಳಲು ತೋಡಿಕೊಂಡರು.

ಮ್ಯಾನೇಜರ್ ಪೂಜಾ ಹೆಚ್.ಎಸ್. ಅವರು ಗ್ರಾಹಕರಿಗೆ ಸಾಲ ಮಾಡಿಸಿ ಕೊಡುವುದಾಗಿ ನಂಬಿಸಿ ದೊಡ್ಡ ಮೊತ್ತದ ಹಣ ಪಡೆದು ಪರಾರಿಯಾಗಿದ್ದಾರೆ. ಈ ಸಂಬಂಧ ಪೂಜಾ ಅವರ ತಂಗಿ ತೇಜಾ, ಪಲ್ಲವಿ, ನಾಗರತ್ನ ಹಾಗೂ ಬ್ಯಾಂಕ್ ಕ್ಯಾಶಿಯರ್ ರಾಜೇಶ್ ವಿರುದ್ಧವೂ ದೂರು ನೀಡಲಾಗಿದೆ.

ಆದರೂ ಆರೋಪಿಗಳನ್ನು ಬಂಧಿಸಿಲ್ಲ, ನಮ್ಮ ಹಣ ವಾಪಸ್ ಕೊಡಿಸಿಲ್ಲ ಎಂದು ಕಿಡಿ ಕಾರಿದರು. ಪ್ರತಿದಿನ ಠಾಣೆಗೆ ಹೋಗಿ ವಿಚಾರಿಸಿದರೂ ತನಿಖೆ ನಡೆಯುತ್ತಿದೆ ಎಂಬ ಉತ್ತರ ಸಿಗುತ್ತಿದೆ. ಆದರೆ ಆರೋಪಿಗಳು ಎಲ್ಲಿದ್ದಾರೆ ಎನ್ನುವ ಸುಳಿವು ಪತ್ತೆಹಚ್ಚುವ ಪ್ರಯತ್ನವೇ ಕಾಣಿಸುತ್ತಿಲ್ಲ.

ವಂಚನೆ ಪ್ರಕರಣದಲ್ಲಿ ಹಾಸನ ನಗರಠಾಣೆಯ ಪೊಲೀಸ್ ಸಿಬ್ಬಂದಿಯೊಬ್ಬರೂ ಭಾಗಿಯಾಗಿದ್ದಾರೆ. ಅವರ ಕಾರಣದಿಂದಲೇ ನಾವು ಹಣ ತೊಡಗಿಸಿದೆವು.

ಆದರೀಗ ಎಲ್ಲರ ಹಣ ಗುಳುಂ ಆಗಿದ್ದರೂ, ನ್ಯಾಯ ಕೊಡಿಸಲು ಯಾರೊಬ್ಬರೂ ಮುಂದೆ ಬರುತ್ತಿಲ್ಲ. ಪೊಲೀಸರೇ ಆಕೆಯೊಂದಿಗೆ ಕೈಜೋಡಿಸಿದ್ದಾರೆ ಎಂಬ ಅನುಮಾನ ಮೂಡಿದೆ ಎಂದರು.

ಆಕೆ ವಂಚನೆ ಮಾಡಿರುವ ಅನೇಕ ದಾಖಲೆ, ಸಂದೇಶ ಹಾಗೂ ಸಂಭಾಷಣೆಯ ದಾಖಲೆಗಳು ತಮ್ಮ ಬಳಿ ಇವೆ. ಆರೋಪಿಗಳು ಮೊಬೈಲ್ ಬಳಕೆ ಮಾಡುತ್ತಿದ್ದರೂ, ಅವರಿರುವ ಸ್ಥಳವನ್ನು ಪತ್ತೆಹಚ್ಚುವ ಪ್ರಯತ್ನ ಆಗುತ್ತಿಲ್ಲ. ಪ್ರಕರಣವನ್ನು ಉದ್ದೇಶ ಪೂರ್ವಕವಾಗಿ ನಿಧಾನಗೊಳಿಸಿ ಆರೋಪಿಗಳನ್ನು ರಕ್ಷಿಸಲಾಗುತ್ತಿದೆ ಎಂದು ಸಂತ್ರಸ್ತರು ಆಕ್ರೋಶ ವ್ಯಕ್ತಪಡಿಸಿದರು.

ಎಸ್ಪಿ ಅವರು ಕೆಲ ದಿನ ಕಾಯಿರಿ ಮಾಧ್ಯಮಗಳ ಬಳಿ ಹೋಗಬೇಡಿ ಅಂತಾರೆ.

ಆದರೂ ಏನೂ ಆಗುತ್ತಿಲ್ಲ. ಇನ್ನಾದರೂ ನಿಷ್ಪಕ್ಷಪಾತ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಬೇಕು. ಮೋಸಹೋಗಿರುವ ನಮಗೆ ಹಣ ವಾಪಸ್ ಕೊಡಿಸಬೇಕು ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಧರ್ಮಪ್ರಕಾಶ್, ಚಂದ್ರೇಗೌಡ, ಗೀತಾ, ಅರುಣ್ ಇದ್ದರು.

## ಈಜು ಸ್ಪರ್ಧೆಯಲ್ಲಿ ಎಸ್.ಕೆ. ಸ್ವಿಮ್ಮಿಂಗ್ ಕೇಂದ್ರ ಮಕ್ಕಳ ಸಾಧನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಎಸ್.ಕೆ.ಸ್ವಿಮ್ಮಿಂಗ್ ಕೇಂದ್ರದ ನಾಲ್ವರು ವಿದ್ಯಾರ್ಥಿಗಳು ಈಜು ಸ್ಪರ್ಧೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆಂದು ಮಿಲೇನಿಯಂ ವರ್ಲ್ಡ್ ಶಾಲೆಯ ದೈಹಿಕ ಶಿಕ್ಷಕ ದಯಾನಂದ್ ಹೇಳಿದರು.




ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಚನ್ನರಾಯಪಟ್ಟಣದ ಜ್ಞಾನಸಾಗರ ಪಬ್ಲಿಕ್ ಶಾಲೆಯ 4ನೇ ತರಗತಿ ವಿದ್ಯಾರ್ಥಿ ಮೋಹಕ್ ಪಿ.ಗೌಡ ಮಹಾರಾಷ್ಟ್ರದಲ್ಲಿ ನಡೆದ 9 ವರ್ಷದೊಳಗಿನ ಓಪನ್ ವಾಟರ್ ಸ್ವಿಮ್ಮಿಂಗ್ ಸ್ಪರ್ಧೆಯಲ್ಲಿ ಒಟ್ಟು 112 ಪದಕ ಗೆದ್ದಿದ್ದಾನೆ. ಅವುಗಳಲ್ಲಿ ಆರು ವೈಯಕ್ತಿಕ ಟ್ರೋಫಿ ಸೇರಿವೆ ಎಂದು ವಿವರಿಸಿದರು.

ನಗರದ ಮಿಲೇನಿಯಂ ವರ್ಲ್ಡ್ ಶಾಲೆಯ 2ನೇ ತರಗತಿಯ ಅದ್ವಿಕಾಗೌಡ ಮಹಾರಾಷ್ಟ್ರದಲ್ಲಿ ನಡೆದ 7 ವಿಭಾಗದಲ್ಲಿ ರಾಷ್ಟ್ರೀಯ ಈಜು ಸ್ಪರ್ಧೆಯಲ್ಲಿ 3.46 ನಿಮಿಷದಲ್ಲಿ ಅರ್ಧ ಕಿ.ಮೀ. ಸಮುದ್ರದಲ್ಲಿ ಈಜುವ ಮೂಲಕ 2026-27ನೇ ಸಾಲಿನಲ್ಲಿ ಇಂಡಿಯನ್ ಬುಕ್ ಆಫ್ ರೆಕಾರ್ಡ್ ಸಾಧನೆ ಮಾಡಿದ್ದಾರೆ. ಒಟ್ಟು 36 ಮೆಡಲ್ಸ್, 4 ವೈಯಕ್ತಿಕ ಟ್ರೋಫಿ ಗೆದ್ದಿದ್ದಾರೆ ಎಂದು ಮಾಹಿತಿ ನೀಡಿದರು.

ಇದೇ ಶಾಲೆಯ 2ನೇ ತರಗತಿ ವಿದ್ಯಾರ್ಥಿ ಸಿ.ಎ.ಚಿರಾಗ್ 34 ಪದಕ ಮತ್ತು 3 ವೈಯಕ್ತಿಕ ಬಹುಮಾನ ಪಡೆದಿದ್ದಾರೆ. 1ನೇ ತರಗತಿ ವಿದ್ಯಾರ್ಥಿನಿ ಡಿ.ಆರ್.ಆಕಾಂಕ್ಷ 12 ಪದಕ ಮತ್ತು 1 ವೈಯಕ್ತಿಕ ಟ್ರೋಫಿ ಪಡೆದಿದ್ದಾಳೆ. ಹಾಸನದ ಮಕ್ಕಳು ಈ ರೀತಿಯ ಸಾಧನೆ ಮಾಡಿರುವುದು ಇದೇ ಮೊದಲು ಎಂದು ಸಂತಸ ಹಂಚಿಕೊಂಡರು.

ಮಹಾರಾಷ್ಟ್ರ ಮಾತ್ರವಲ್ಲದೆ ಬೆಂಗಳೂರು, ಮಂಗಳೂರು, ಮೈಸೂರು, ಶಿವಮೊಗ್ಗ, ಪುಣೆ, ದೆಹಲಿ ಹಾಗೂ ರಾಜ್ಯದ ವಿವಿಧೆಡೆ ನಡೆದ ಈಜು ಸ್ಪರ್ಧೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ್ದಾರೆ. ತರಬೇತುದಾರರಾದ ಸೈಯದ್, ಶ್ರೀನಿವಾಸ್, ರಾಘು ಅವರ ಪರಿಶ್ರಮದಿಂದ ಸಾಧನೆ ಸಾಧ್ಯವಾಗಿದೆ ಎಂದರು.

## ಬೇಲೂರಿನ ಚರಂಡಿ ಸಮಸ್ಯೆಗೆ ಶಾಶ್ವತ ಪರಿಹಾರದ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪುರಸಭೆ ವ್ಯಾಪ್ತಿಯ 3ನೇ ವಾರ್ಡ್‌ನಲ್ಲಿ ಹಲವು ವರ್ಷಗಳಿಂದ ಕಾಡುತ್ತಿರುವ ಒಳಚರಂಡಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಪುರಸಭೆ ಅಧ್ಯಕ್ಷ ಅಕ್ರಂ ಷರೀಫ್ ನೇತೃತ್ವದಲ್ಲಿ ಅಧಿಕಾರಿಗಳು ಗುರುವಾರ ಸ್ಥಳ ಪರಿಶೀಲಿಸಿದರು.



ಪುರಸಭೆ ಅಧ್ಯಕ್ಷ ಅಕ್ರಂ ಷರೀಫ್ ಮಾತನಾಡಿ, 3ನೇ ವಾರ್ಡ್‌ನಲ್ಲಿ ಹಲವು ವರ್ಷಗಳಿಂದ ಒಳಚರಂಡಿ ಹಾಗೂ ಚರಂಡಿ ಸಮಸ್ಯೆ ಜೀವಂತವಾಗಿದೆ. ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಈ ಹಿಂದೆ ಟೆಂಡರ್ ಪ್ರಕ್ರಿಯೆ ನಡೆದಿದ್ದರೂ ಅದು ವಾಪಾಸ್ ಆಗಿತ್ತು. ನಂತರ ಇಂಜಿನಿಯರ್, ಮುಖ್ಯಾಧಿಕಾರಿಗಳ ಗಮನಕ್ಕೆ ವಿಷಯ ತಂದು ಕಾಮಗಾರಿಗೆ ಸಂಬಂಧಿಸಿದ ಹೊಸ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿತ್ತು. ಆದರೆ ಈ ಪ್ರದೇಶವು ಹೋಲಿ ಕ್ರಾಸ್ ಆಸ್ಪತ್ರೆಗೆ ಸೇರಿದ ಜಾಗವಾಗಿರುವುದರಿಂದ ಒಳಚರಂಡಿ ಮತ್ತು ಚರಂಡಿ ನಿರ್ಮಾಣಕ್ಕೆ ಅನುಮತಿ ಅಗತ್ಯವಿತ್ತು. ಸಾರ್ವಜನಿಕ ಹಿತದೃಷ್ಟಿಯಿಂದ ಸಹಕಾರ ನೀಡಲು ಅವರು ಸಮ್ಮತಿಸಿದ್ದರಿಂದ ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. ಭಾಗದ ಸಾರ್ವಜನಿಕರ ಬಹುದಿನಗಳ ಬೇಡಿಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಸ್ಥಳೀಯ ಮುಖಂಡ ಚಂದ್ರಶೆಟ್ಟಿ ಮಾತನಾಡಿ, ವಾರ್ಡ್‌ನ ಸಮಸ್ಯೆ ಕುರಿತು ಹಲವು ಬಾರಿ ಮನವಿ ಮಾಡಲಾಗಿತ್ತು. ಮೊದಲ ಟೆಂಡರ್ ವಾಪಸ್ಸಾದ ಬಳಿಕ ಮತ್ತೊಮ್ಮೆ ಅಧ್ಯಕ್ಷರು ಮತ್ತು ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಇದೀಗ ಹೊಸ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದರು.

ಪುರಸಭೆ ಮುಖ್ಯಾಧಿಕಾರಿ ಬಸವರಾಜ್ ಸಿಗ್ಗಾವಿ, ಎಂಜಿನಿಯರ್ ಮೋಹನ್, ಪತ್ರಕರ್ತ ಜೇಮ್ಸ್ ಡಿಸೋಜಾ, ಫಾ. ರಾಯಪ್ಪ, ಆರೋಗ್ಯಾಧಿಕಾರಿ ಡಾ. ಲೋಹಿತ್, ತನ್ವೀರ್ ಇತರರಿದ್ದರು.

# ಹಾಸನಕ್ಕೆ 15 ಕರ್ನಾಟಕ ಪಬ್ಲಿಕ್ ಶಾಲೆ ಮಂಜೂರು

## ಹಾಲಿ 15 ಶಾಲೆಗಳ ಕಾರ್ಯ ನಿರ್ವಹಣೆ । ಪ್ರಸಕ್ತ ಸಾಲಿನಿಂದಲೇ ಆದೇಶ ಜಾರಿ ಸಾಧ್ಯತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಖಾಸಗಿ ಶಾಲೆಗಳ ವ್ಯಾಮೋಹದಿಂದ ಮಕ್ಕಳು ಹಾಗು ಪೋಷಕರನ್ನು ಹೊರತರುವ ಉದ್ದೇಶದಿಂದ ಜಾರಿಯಾದ ಕೆಪಿಎಸ್ ಶಾಲೆಗೆ ಜಿಲ್ಲೆಯಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಹೆಚ್ಚುವರಿಯಾಗಿ 15 ಶಾಲೆಗಳು ಆರಂಭವಾಗುವ ನಿರೀಕ್ಷೆ ಮೂಡಿದೆ.

ಜಿಲ್ಲೆಯಲ್ಲಿ ಈಗಾಗಲೇ 15 ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. 2025-26ನೇ ಸಾಲಿನ ಬಜೆಟ್ ಘೋಷಣೆಯಂತೆ 2026-27ನೇ ಸಾಲಿಗೆ ರಾಜ್ಯದ ಆಯ್ದ 500 ಸರ್ಕಾರಿ ಶಾಲೆಗಳನ್ನು ರಾಜ್ಯ ಆಯವ್ಯಯದ ಅನುದಾನ ಮತ್ತು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ ಸಾಲ ಯೋಜನೆಯಡಿ ಹೆಚ್ಚುವರಿ ಮೂಲಸೌಕರ್ಯ ಒದಗಿಸುವ ಸಂಬಂಧ ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ 474 ಶಾಲೆಗಳನ್ನು ಉನ್ನತೀಕರಿಸಲು 2025ರ ಅ. 15ರ ಆದೇಶದಂತೆ ಸರ್ಕಾರ ಕ್ರಮ ಕೈಗೊಂಡಿದ್ದು ಜಿಲ್ಲೆಯಲ್ಲಿ 15 ಶಾಲೆಗಳನ್ನು ಉನ್ನತೀಕರಿಸಲು ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದ ಎಲ್ಲಿಯೇ ಕೆಪಿಎಸ್ ಶಾಲೆ ಪ್ರಾರಂಭಿಸಬೇಕೆಂದರೆ ಶಿಕ್ಷಣ ಇಲಾಖೆ ಕೆಲವು ಮಾನದಂಡಗಳನ್ನು ಹಾಕಿದೆ. ಸರ್ಕಾರಿ ಶಾಲೆಯಾಗಿರಬೇಕು. ಒಂದೇ ಆವರಣದಲ್ಲಿ ಎಲ್‌ಕೆಜಿಯಿಂದ 12ನೇ ತರಗತಿ ವರೆಗೆ ಬೋಧನೆಗೆ ಅವಕಾಶವಿರಬೇಕು. ಸುಮಾರು 500 ಮೀಟರ್ ಅಂತರದಲ್ಲಿರುವ ಶಾಲೆಗಳನ್ನು ಪರಿಗಣಿಸುವುದು. ಒಟ್ಟು ವಿದ್ಯಾರ್ಥಿಗಳ




ದಾಖಲಾತಿ ಸಂಖ್ಯೆ 200 ಅಥವಾ ಅದಕ್ಕಿಂತ ಹೆಚಿ್ಚರಬೇಕು. ಶಾಲೆಯ ಹೆಸರಿನಲ್ಲಿ 3 ರಿಂದ 5 ಎಕರೆ ಜಾಗ ಹೊಂದಿರಬೇಕು. ಈ ಎಲ್ಲಾ ಅರ್ಹತೆಗಳನ್ನು ಒಳಗೊಂಡ 15 ಶಾಲೆಗಳ ಹೆಸರನ್ನು ಶಿಕ್ಷಣ ಇಲಾಖೆ ಸರ್ಕಾರಕ್ಕೆ ಸಲ್ಲಿಸಿದೆ.

### ಮಂಜೂರಾದ ಶಾಲೆಗಳ ಮಾಹಿತಿ

ಆಲೂರು ತಾಲ್ಲೂಕಿನ ಕಾಮತಿ ಕೂಡಿಗೆ ಸರ್ಕಾರಿ ಪ್ರೌಢಶಾಲೆ (144 ಮಕ್ಕಳ ಸಂಖ್ಯೆ), ಅರಕಲಗೂಡು ತಾಲ್ಲೂಕಿನ ದೊಡ್ಡಮಗ್ಗೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ (607), ಬೆಳವಾಡಿ ಹಿರಿಯ ಪ್ರಾಥಮಿಕ ಶಾಲೆ (229), ಅರಸೀಕೆರೆಯ ಕುರುವಂಕ ಸರ್ಕಾರಿ ಪ್ರೌಢ ಶಾಲೆ (122), ಬಾಣಾವರ ಸರ್ಕಾರಿ ಪದವಿಪೂರ್ವ ಕಾಲೇಜು (200), ಡಿ.ಎಂ.ಕುರ್ಕೆ ಸರ್ಕಾರಿ ಪದವಿ ಪೂರ್ವ ಕಾಲೇಜು (195), ಜಾವಗಲ್ ಪದವಿ ಪೂರ್ವ ಕಾಲೇಜು (673) ಮತ್ತು ಬೇಲೂರು ತಾಲ್ಲೂಕಿನ ಅರೇಹಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜು (441), ಚನ್ನರಾಯಪಟ್ಟಣದ ಬಾಗೂರು ಸರ್ಕಾರಿ ಪ್ರೌಢಶಾಲೆ (176), ಶ್ರವಣಬೆಳಗೊಳ ಕಾಲೇಜು (298), ಹಾಸನ ತಾಲ್ಲೂಕಿನ ನಿಟ್ಟೂರು (422), ಚಿಕ್ಕನಾಳು ಸರ್ಕಾರಿ ಪ್ರೌಢಶಾಲೆ (259), ಗೊರೂರು ಸರ್ಕಾರಿ ಪದವಿಪೂರ್ವ ಕಾಲೇಜು (249), ಹೊಳೆನರಸೀಪುರ ತಾಲ್ಲೂಕಿನ ಪಡುವಲಹಿಪ್ಪೆ (456) ಹಾಗೂ ಮೂಡಲಹಿಪ್ಪೆ ಸರ್ಕಾರಿ ಪದವಿ ಪೂರ್ವ ಕಾಲೇಜು (238) ಸೇರಿ 4709 ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಕೆಪಿಎಸ್ ಶಾಲೆ ಪ್ರಾರಂಭಿಸಲು ವಿದ್ಯಾರ್ಥಿಗಳ ಸಂಖ್ಯೆ ಕನಿಷ್ಟ 200 ಇರಲಬೇಕೆಂಬ ನಿಯಮ ಇರುವುದರಿಂದ ಕಡಿಮೆ ದಾಖಲಾತಿ ಇರುವ ಪಕ್ಕದ ಶಾಲೆಗಳನ್ನು ವಿಲೀನಗೊಳಿಸಲು ನಿರ್ಧರಿಸಲಾಗಿದೆ.

### ವಿರೋಧದ ನಡುವೆಯೂ ಶಾಲೆಗಳ ವಿಲೀನ

ಸರ್ಕಾರಿ ಶಾಲೆಗಳ ಉಳಿಸಬೇಕೆಂದರೆ ಶಿಕ್ಷಣ ತಜ್ಞರು, ವಿದ್ಯಾರ್ಥಿ ಸಂಘಟನೆಗಳು ರಾಜ್ಯಾದ್ಯಂತ ಹೋರಾಟ ನಡೆಸುತ್ತಿದ್ದರೂ ಸರ್ಕಾರ ಕೆಪಿಎಸ್ ಶಾಲೆಗಳ ಮೂಲಕ ಕಡಿಮೆ ದಾಖಲಾತಿ ಇರುವ ಶಾಲೆಗಳ ವಿಲೀನಕ್ಕೆ ಮುಂದಾಗಿದೆ. ಕೆಪಿಎಸ್ ಶಾಲೆ ಎಂದರೆ ಇಂಗ್ಲಿಷ್ ಮಾಧ್ಯಮದ ಜೊತೆಗೆ ದ್ವಿತೀಯ ಪಿಯು ವರೆಗೆ ಮಕ್ಕಳ ವ್ಯಾಸಂಗಕ್ಕೆ ಕೊರತೆಯಾಗುವುದಿಲ್ಲ ಎಂಬ ಆಶಾಭಾವ ಪೋಷಕರದ್ದಾಗಿದೆ. ಜನಪ್ರತಿನಿಧಿಗಳು ಸಹ ಕೆಪಿಎಸ್ ಶಾಲೆಗಳನ್ನು ಸ್ವಾಗತಿಸಿರುವುದರಿಂದ ಕಡಿಮೆ ದಾಖಲಾತಿ ಹೊಂದಿರುವ ಶಾಲೆಗಳು ಮುಚ್ಚುವುದು ಅನಿವಾರ್ಯವಾಗಿದೆ.

### ಕಾರ್ಯನಿರ್ವಹಿಸುತ್ತಿರುವ ಕೆಪಿಎಸ್‌ಗಳು

ಪ್ರಸ್ತುತ ಆಲೂರು ತಾಲ್ಲೂಕಿನ ರಾಯರಕೊಪ್ಪಲು, ಅರಕಲಗೂಡಿನ ಬಸವಾಪಟ್ಟಣ, ಅರಸೀಕೆರೆಯ ಚಿಂದೇನಹಳ್ಳಿ ಗೇಟ್, ಬೇಲೂರಿನ ಹಳೇಬೀಡು, ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಹಾಗು ಉದಯಪುರ, ಹಾಸನ ತಾಲ್ಲೂಕಿನ ಮೊಸಳೆ ಹೊಸಹಳ್ಳಿ, ಸೋಮಹಳ್ಳಿ ಹಾಗು ಶಾಂತಿಗ್ರಾಮ, ಹೊಳೆನರಸೀಪುರದ ಹರಿಹರಪುರ, ಬಾಲಕರ ಶಾಲೆ ಹೊಳೆನರಸೀಪುರ, ಬಾಲಕಿಯರ ಶಾಲೆ, ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹಾಗೂ ಹಾನುಬಾಳುವಿನಲ್ಲಿ ಕೆಪಿಎಸ್ ಪ್ರಾರಂಭವಾಗಿದ್ದು ಒಟ್ಟು 6444 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

## ವಸತಿ ರಹಿತರ ಆಶ್ರಯ ಘಟಕ: ಪ್ರಚಾರಕ್ಕೆ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ವ್ಯಾಪ್ತಿಯಲ್ಲಿ ಆಶ್ರಯ ಇಲ್ಲದೆ, ರಸ್ತೆ ಬದಿ, ಬಸ್ ನಿಲ್ದಾಣಗಳಲ್ಲಿ ಮಲಗುವ ನಿರ್ಗತಿಕರು ಮಹಾನಗರ ಪಾಲಿಕೆ ಹಿಂಭಾಗದಲ್ಲಿರುವ ವಸತಿ ರಹಿತರ ಆಶ್ರಯ ಘಟಕದ (ಪುರುಷರ), ಸೌಲಭ್ಯ ಪಡೆದುಕೊಳ್ಳಲು ಹೆಚ್ಚಿನ ಪ್ರಚಾರಕ್ಕೆ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಡೇ-ನಲ್ಮ್ ಯೋಜನೆಯಡಿ ನಗರ ವಸತಿ ರಹಿತರ ಆಶ್ರಯ ಕೇಂದ್ರದ ಅಧಿಕಾರಯುಕ್ತ ಸಮಿತಿ ಸಭೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ನಗರದಲ್ಲಿ ಆಶ್ರಯ ಕೇಂದ್ರವನ್ನು ಎನ್‌ಜಿಓ ಅವರು ನಿರ್ವಹಿಸುತ್ತಿದ್ದು, ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ ಅವಶ್ಯಕತೆ ಇರುವ ಪುರುಷ ವಸತಿ ರಹಿತರಿಗೆ ಆಶ್ರಯ ಕಲ್ಪಿಸುವ ಕಾರ್ಯವನ್ನು ಮಾಡುವಂತೆ ನಿರ್ದೇಶನ ನೀಡಿದರು.

ಯಾವುದೇ ನಿರ್ಗತಿಕರು, ವಸತಿ ಇಲ್ಲದೆ ರಸ್ತೆ ಬದಿಯಲ್ಲಿ ಯಾರೂ ಕೂಡ ಮಲಗಬಾರದು. ಈ ಬಗ್ಗೆ ಎಚ್ಚರ ವಹಿಸಿ ಕ್ರಮಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಆಶ್ರಯ ಕೇಂದ್ರದಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಂತೆ ಹಾಗೂ ಅಧಿಕಾರಿಗಳು ಇಲಾಖಾ ವ್ಯಾಪ್ತಿಯಲ್ಲಿ ಬರುವ ನಗರ ವಸತಿ ರಹಿತರನ್ನು ಆಶ್ರಯ ಕೇಂದ್ರದಲ್ಲಿ ಆಶ್ರಯ ಪಡೆಯಲು ಕ್ರಮ ವಹಿಸಲು ತಿಳಿಸಿದರು.

ಸಭೆಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು

## ವಿದ್ಯಾರ್ಥಿ ನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ತಾಲ್ಲೂಕಿನಲ್ಲಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ 2026-27ನೇ ಸಾಲಿಗೆ ಪ್ರವೇಶಾತಿ ಪಡೆಯಲು ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. 6 ರಿಂದ 10 ನೇ ತರಗತಿಗೆ ಹಾಗೂ ಪದವಿ ವ್ಯಾಸಂಗ ಮಾಡಲು ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರನ್ನು ಅಥವಾ ಹಾಸನ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯನ್ನುಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಬಾಲ್ಯ ವಿವಾಹ-ಕಾರ್ಮಿಕರ ಪತ್ತೆಗೆ ಕ್ರಮ ವಹಿಸಲು ಸೂಚನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಬಾಲ್ಯ ವಿವಾಹ, ಪೋಕ್ಸೋ ಪ್ರಕರಣಗಳ ತಡೆಗೆ ಮತ್ತು ಬಾಲ ಕಾರ್ಮಿಕರ ಪತ್ತೆಗಾಗಿ ಕ್ರಮ ಕೈಗೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹೇಮಾವತಿ ಸೂಚಿಸಿದ್ದಾರೆ.

ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ಬಾಲ್ಯ ವಿವಾಹ ತಡೆಗೆ ಸಹಾಯವಾಣಿ ಸಂಖ್ಯೆ ಕುರಿತು ವ್ಯಾಪಕ ಪ್ರಚಾರ ಆಗಬೇಕು. ಬಾಲ್ಯ ವಿವಾಹ ತಡೆದ ನಂತರ ಮುಂದೆ ಅದನ್ನು ಫಾಲೋ ಅಪ್ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಯಾವುದೇ ಮಗುವು ಶಿಕ್ಷಣದಿಂದ ವಂಚಿತರಾಗದಂತೆ ನಿಗಾ ವಹಿಸಬೇಕು. ಈ ನಿಟ್ಟಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಶಾಲೆಗೆ ಮರು ಸೇರ್ಪಡೆಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಶಾಲೆಗಳಲ್ಲಿ ಪೋಷಕರ ಸಭೆ ನಡೆಸುವ ಸಂದರ್ಭದಲ್ಲಿ ಪೋಕ್ಸೋ, ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ ಕುರಿತು ತಿಳವಳಿಕೆ ಮೂಡಿಸುವ ಮೂಲಕ ಮನಃಪರಿವರ್ತನೆಗೆ ಕ್ರಮಕ್ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ಶಿಕ್ಷಕರಿಗೆ ತರಬೇತಿ ಆಯೋಜಿಸಿದ ಸಂದರ್ಭದಲ್ಲಿ ನ್ಯಾಯಾಧೀಶರು, ಪೊಲೀಸ್ ಅಧಿಕಾರಿಗಳಿಂದ ಕಾಯ್ದೆ ಕುರಿತು ಉಪನ್ಯಾಸ ನೀಡಲು ಆಹ್ವಾನಿಸುವಂತೆ ಸೂಚಿಸಿದರು.

ಮಕ್ಕಳನ್ನು ಯಾವುದೇ ಕಾರ್ಯಕ್ರಮದ ಮೆರವಣಿಗೆಗೆ ಬಳಸಿಕೊಳ್ಳುವಂತಿಲ್ಲ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಎಚ್ಚರ ವಹಿಸಬೇಕು. ಪೋಕ್ಸೋ ಪ್ರಕರಣದಲ್ಲಿ ಸಾಕ್ಷಿ ಹಾಳಾಗದಂತೆ ವಿಳಂಬ ಮಾಡದೆ ಘಟನೆಯಾದ ತಕ್ಷಣ ತಪಾಸಣೆ ನಡೆಸಿ ಮೆಡಿಕಲ್ ರಿಪೋರ್ಟ್ ಪಡೆದುಕೊಳ್ಳಲು ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

ಬಸ್ ನಿಲ್ದಾಣ, ರಸ್ತೆ ಪಕ್ಕದಲ್ಲಿ, ಅಂಗಡಿಗಳ ಮುಂದೆ ನಿರಾಶ್ರಿತರು ರಾತ್ರಿ ವೇಳೆಯಲ್ಲಿ ಮಲಗುತ್ತಾರೆ. ಅವರ ರಕ್ಷಣೆ ಹಿತದೃಷ್ಟಿಯಿಂದ ತಂಗಲು ವ್ಯವಸ್ಥೆಗೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಾರ್ವಜನಿಕರ ಯಾವುದೇ ಸಮಸ್ಯೆಯಾಗಲಿ ಅದು ತಮ್ಮ ಮನೆಯ ಸಮಸ್ಯೆ ಎಂದು ಭಾವಿಸಿ ಪರಿಹಾರ ಒದಗಿಸಲು ಸ್ಪಂದಿಸಿ ಜವಾಬ್ದಾರಿಯಿಂದ ನೊಂದವರಿಗೆ ಪರಿಹಾರ ಕಲ್ಪಿಸಲು ನಿಗಾವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಕೆರೆಗಳ ಒತ್ತುವರಿ ಯನ್ನು ತೆರವುಗೊಳಿಸಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರಲ್ಲದೆ, ಕೆರೆಗಳಲ್ಲಿ ಹೂಳು ತುಂಬಿರುವುದನ್ನು ತೆಗೆಯುವುದರಿಂದ ಮಳೆಗಾಲದಲ್ಲಿ ನೀರು ಶೇಖರಣೆಯಾಗಿ ಕೃಷಿ ಚಟುವಟಿಕೆಗಳಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿಗೆ ಸಹಾಯವಾಗುತ್ತದೆ ಎಂದರು.

## ಹಬ್ಬಕ್ಕೆಂದು ತೆರಳಿದ್ದ ದಂಪತಿ ನಾಪತ್ತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಹಬಕ್ಕೆಂದು ತೆರಳಿದ್ದ ದಂಪತಿ ನಾಪತ್ತೆಯಾಗಿರುವ ಪ್ರಕರಣ ತಾಲ್ಲೂಕಿನ ಜಕ್ಕನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗಂಡಸಿ ಹೋಬಳಿ ಜಕ್ಕನಹಳ್ಳಿಯ ಮಂಜೇಗೌಡ ಹಾಗು ಮಂಜುಳ ನಾಪತ್ತೆಯಾದವರು. ಮೇ 7ರಂದು ಕಬ್ಬಳ್ಳಿ ಹೊಸಹಳ್ಳಿ ಗ್ರಾಮದಲ್ಲಿ ಜರುಗಿದ ಹಬ್ಬಕ್ಕೆ ಹೋಗಿ ಬರುವುದಾಗಿ ಹೇಳಿ ಹೋದವರು ವಾಪಾಸ್ ಬಂದಿಲ್ಲ. ಕಳೆದ ಒಂದು ವಾರದಿಂದ ಎಲ್ಲಾ ಹುಡುಕಿದರೂ ಸುಳಿವು ಸಿಗದ ಹಿನ್ನಲೆಯಲ್ಲಿ ಗಂಡಸಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಲಾಗಿದೆ.68 ವರ್ಷದ ಮಂಜೇಗೌಡ 4.2 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಬಣ್ಣ, ದುಂಡು ಮುಖ ಹೊಂದಿದ್ದು ಕನ್ನಡ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಬಿಳಿ ಶರ್ಟ್ ಮತ್ತು ಬಿಳಿ ಪಂಚೆ ಧರಿಸಿದ್ದರು. 64 ವರ್ಷದ ಮಂಜುಳ 5.2 ಅಡಿ ಎತ್ತರವಿದ್ದು ಕೆಂಪು, ಕಾಫಿ ಬಣ್ಣದ ಸೀರೆ, ಕಾಫಿ ಬಣ್ಣದ ರವಿಕೆ ಧರಿಸಿದ್ದಾರೆ. ಅವರ ಸುಳಿವು ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆ ಅಥವಾ ಮೊ.ನಂ. 9480804755 ಇಲ್ಲಿಗೆ ಸಂಪರ್ಕಿಸಲು ತಿಳಿಸಿದೆ.

## ಜೂಜು ಆಡಿಸುತ್ತಿದ್ದ ವ್ಯಕ್ತಿ ಬಂಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಜೂಜು ಆಡಿಸುತ್ತಿದ್ದ ವ್ಯಕ್ತಿಯನ್ನು ಬಂಧಿಸಿರುವ ಪೊಲೀಸರು ಪಣಕ್ಕಿಟ್ಟಿದ್ದ 1140 ರೂ. ವಶಪಡಿಸಿಕೊಂಡಿದ್ದಾರೆ. ಮೆಹಬೂಬ್ ನಗರ ನಿವಾಸಿ ಖಾಲಕ್ ಬಂಧಿತ ಆರೋಪಿ. ಹಳೇ ಮಟನ್ ಮಾರ್ಕೆಟ್ ಸರ್ಕಲ್‌ನಲ್ಲಿ ಒಂದು ರೂಪಾಯಿಗೆ 80 ರೂ. ಕೊಡುವುದಾಗಿ ಸಾರ್ವಜನಿಕರನ್ನು ಕರೆಯುತ್ತಿದ್ದನು. ವಿಷಯ ತಿಳಿದು ಸ್ಥಳಕ್ಕೆ ದೌಡಾಯಿಸಿದ ಪೆನ್ಷನ್ ಮೊಹಲ್ಲಾ ಠಾಣೆ ಪೊಲೀಸರು ಆತನನ್ನು ವಶಕ್ಕೆ ಪಡೆದಿದ್ದಾರೆ.

## ದಾಸರಕೊಪ್ಪಲಿನಲ್ಲಿ ಚರಂಡಿ, ರಸ್ತೆ ಕಾಮಗಾರಿಗೆ ಭೂಮಿಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**


ಹಾಸನ: ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದಾಸರಕೊಪ್ಪಲು ಗ್ರಾಮದಲ್ಲಿ ಮಹಾನಗರ ಪಾಲಿಕೆಯ 1.33 ಕೋಟಿ ರೂ. ಅನುದಾನದಡಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಬುಧವಾರ ಭೂಮಿಪೂಜೆ ನೆರವೇರಿಸಿದರು. ಗ್ರಾಮದಲ್ಲಿ ರಸ್ತೆ ಕಾಮಗಾರಿ ಕೈಗೊಳ್ಳುವಂತೆ ಗ್ರಾಮಸ್ಥರು ಹಲವು ತಿಂಗಳಿಂದ ಬೇಡಿಕೆ ಸಲ್ಲಿಸುತ್ತಿದ್ದರು. ಆ ಹಿನ್ನಲೆಯಲ್ಲಿ ಕ್ರಮ ಕೈಗೊಂಡಿರುವ ಶಾಸಕರು ಅಧಿಕಾರಿ ಹಾಗು ಗ್ರಾಮಸ್ಥರ ಸಮ್ಮುಖದಲ್ಲಿ ಪೂಜೆ ನೆರವೇರಿಸಿದರು. ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡುವಂತೆ ಇದೇ ಸಂದರ್ಭದಲ್ಲಿ ಗುತ್ತಿಗೆದಾರರಿಗೆ ಸೂಚಿಸಿದರು.

ಪಕ್ಷದ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.



# ಸಮಾಜದ ಮೂಲಾಧಾರಸ್ತಂಭವೇ ಕುಟುಂಬ

**ಕೆ.ಎನ್.ಚಿದಾನಂದ ಹಾಸನ**



## (ಇಂದು ವಿಶ್ವ ಕುಟುಂಬ ದಿನ)

ರೀ ಪ್ರಕಾಶ್, ಮನೆಯಲ್ಲಿ ತುಂಬಾ ಬೇಜಾರು ಅನ್ಸುತ್ತೆ. ಒಂದು ದಿನ ಎಲ್ಲಾದ್ರೂ ಹೊರಗಡೆ ಎಲ್ಲರೂ ಹೋಗಿ ಬರಬೇಕು ಅನ್ಸುತ್ತೆ ಕಣ್ರಿ ಅಂತ ಹೆಂಡತಿ ಸವಿತ ಹೇಳಿದ್ಲು. ಸವಿತಾ, ಈಗ ಆಗೋದಿಲ್ಲ. ಆಫೀಸ್ ನಲ್ಲಿ ಮೀಟಿಂಗ್ಸ್, ಕೆಲಸ ಕಾರ್ಯಗಳು ಜಾಸ್ತಿ ಇವೆ ಎಂದ ಪ್ರಕಾಶ್. ನಗರದ ಜಂಜಾಟದ ನಡುವೆ ʼಬೆಜೇನುಗೂಡುʼ ಎಂಬ ಹಳೆಯ ಶೈಲಿಯ ಮನೆ ಇತ್ತು. ಅಲ್ಲಿ ವಾಸವಿದ್ದದ್ದು ಮೂರು ತಲೆಮಾರುಗಳ ಒಂದು ಪುಟ್ಟ ಕುಟುಂಬ. ಅಜ್ಜ ರಾಮನಾಥ, ಮಗ ಪ್ರಕಾಶ್, ಸೊಸೆ ಸವಿತ ಮತ್ತು ಮೊಮ್ಮಗ ಕಿರಣ್. ಬೆಳಗಿನ ಸೂರ್ಯ ಕಿರಣಗಳು ಕಿಟಕಿಯ ಸಂದುಗಳಿಂದ ಇಣುಕುತ್ತಿದ್ದರೂ, ʼಬೆಜೇನುಗೂಡುʼ ಮನೆಯ ಒಳಗೆ ಒಂದು ರೀತಿಯ ಶೀತಲ ಮೌನವಿತ್ತು. ಇದು ಜಗಳದ ಮೌನವಲ್ಲ, ಬದಲಿಗೆ ʼಆಧುನಿಕತೆಯ ಅಂತರʼ.

ರಾಮನಾಥ್ ಅವರು ಕೈಯಲ್ಲಿ ಪತ್ರಿಕೆ ಹಿಡಿದು ಹಜಾರದಲ್ಲಿ ಕುಳಿತಿದ್ದರು. ಪ್ರಕಾಶ್ ಆಫೀಸ್‌ಗೆ ಹೊರಡುವ ತರಾತುರಿಯಲ್ಲಿದ್ದರೆ, ಕಿರಣ್ ತನ್ನ ಮೊಬೈಲ್‌ನಲ್ಲಿ ಮುಳುಗಿದ್ದ. ಆಗ ರಾಮನಾಥ್, ಪ್ರಕಾಶ್, ಇವತ್ತು ಮೇ 15 ಅಂತ ನೆನಪಿದೆಯೇನಪ್ಪಾ? ಪ್ರಕಾಶ್ (ತಲೆ ಎತ್ತದೆ) ಗೊತ್ತು ಅಪ್ಪಾ, ಇವತ್ತು ನನ್ನ ಕ್ಲೈಂಟ್ ಮೀಟಿಂಗ್ ಇದೆ. ತುಂಬಾ ಇಂಪಾರ್ಟೆಂಟ್ ದಿನ. ರಾಮನಾಥ್ (ಸಣ್ಣ ನಗುವಿನೊಂದಿಗೆ) ಅದಕ್ಕಿಂತ ಮುಖ್ಯವಾದದ್ದು ಇನ್ನೊಂದಿದೆ. ಇವತ್ತು ಅಂತರರಾಷ್ಟ್ರೀಯ ಕೌಟುಂಬಿಕ ದಿನ. ವರ್ಷ ಪೂರ್ತಿ ಈ ಗೋಡೆಗಳ ಮಧ್ಯೆ ಇದ್ದರೂ, ನಾವೆಲ್ಲಾ ಒಂದಾಗಿ ಕೂತು ಮಾತಾಡಿ ಎಷ್ಟು ದಿನ ಆಯ್ತು? ಅಂದಾಗ ಕೂಡಲೇ ಮೊಮ್ಮಗ ಕಿರಣ್ ಹೇಳಿದ ಅಜ್ಜಾ, ಫ್ಯಾಮಿಲಿ ಡೇ ಅಂತೆಲ್ಲಾ ಆಚರಿಸೋದು ಹಳೆ ಕಾಲ. ಈಗ ಏನಿದ್ರೂ ಡಿಜಿಟಲ್ ಕನೆಕ್ಷನ್! ಅಂತ ಹೇಳಿದಾಗ ರಾಮನಾಥ್ ಈ ಮನೆಯಲ್ಲಿರುವವರು ಒಂದೇ ಚಾವಣಿಯ ಅಡಿಯಲ್ಲಿ ವಾಸಿಸುತ್ತಿದ್ದರೂ, ನಾವೆಲ್ಲರೂ ಬೇರೆ ಬೇರೆ ದ್ವೀಪಗಳಂತಿದ್ದೇವೆ. ಅಪ್ಪ-ಮಗ-ಮೊಮ್ಮಗ ಎಂಬ ಮೂರು ಕೊಂಡಿಗಳು ಒಂದೇ ಸರಪಳಿಯಲ್ಲಿದ್ದರೂ ಇವುಗಳ ನಡುವೆ ಪ್ರೀತಿಯ ಬೆಸುಗೆ ತುಕ್ಕು ಹಿಡಿದಿದೆ. ನೀವು ಯಾರಾದ್ರು ಅಬ್ ಸರ್ವ್ ಮಾಡಿದ್ದೀರಾ ಎಂದು ಕೇಳಿದ. ಮುಂದುವರಿದು ರಾಮನಾಥ್ ಅವರು ಕೇಳಿದ ಇವತ್ತು ಫ್ಯಾಮಿಲಿ ಡೇ ಅಲ್ವಾ ಎಂಬ ಪ್ರಶ್ನೆ, ಶಾಂತವಾದ ಕೊಳಕ್ಕೆ ಎಸೆದ ಕಲ್ಲಿನಂತಿತ್ತು. ಅಲೆಗಳು ಎದ್ದರೂ ಪ್ರಕಾಶ್ ಮತ್ತು ಕಿರಣ್ ಅದಕ್ಕೆ ಸ್ಪಂದಿಸಲಿಲ್ಲ.

ಅಡುಗೆ ಮನೆಯಿಂದ ಬಂದ ಸವಿತ ಎಲ್ಲರ ಕೈಗೂ ಕಾಫಿ ನೀಡುತ್ತಾ ಮಧ್ಯ ಪ್ರವೇಶಿಸಿದಳು. ಸವಿತ ಅಡುಗೆ ಮನೆಯಿಂದ ಹೊರಬಂದಾಗ ಅವಳ ಮುಖದಲ್ಲಿ ಒಂದು ದೃಢತೆ ಇತ್ತು. ಕಿರಣ್ ಈ ಡಿಜಿಟಲ್ ಕನೆಕ್ಷನ್ ಹಸಿವಾದಾಗ ಊಟ ಹಾಕಲ್ಲ ಕಣೋ. ಅಂದಹಾಗೆ ಅಪ್ಪಾಜಿ, ಇವತ್ತು ನಾವು ಯಾರೂ ಆಫೀಸ್‌ಗೆ ಹೋಗ್ತಿಲ್ಲ, ಕಿರಣ್ ಕಾಲೇಜಿಗೂ ರಜೆ ಹಾಕುತ್ತಿದ್ದಾನೆ. ಅಂದಾಗ ಪ್ರಕಾಶ್, ಅದೇಗೆ ಸಾಧ್ಯ ಸವಿತ. ಮೀಟಿಂಗ್ ಇದೆ ಅಂದ್ನಲ್ಲ. ಕೂಡಲೇ ಸವಿತ ಆ ಮೀಟಿಂಗ್ ನಾಳೆ ಮಾಡಬಹುದು. ಆದರೆ ನಮ್ಮ ಈ ಕೌಟುಂಬಿಕ ದಿನ ಇವತ್ತು ಕಳೆದರೆ ಮತ್ತೆ ಬರಲ್ಲ. ಕುಟುಂಬದ ಮಹತ್ವವನ್ನು ಅರಿತು ವಿಶ್ವಸಂಸ್ಥೆ ಮೇ 15 ನೇ ತಾರೀಖಿನ್ನು ಇಡೀ ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲೂ ಕುಟುಂಬ ದಿನವನ್ನಾಗಿ ಆಚರಿಸಲು ಸೂಚಿಸಿದೆ. ಎಲ್ರೂ ದಯಮಾಡಿ ಅರ್ಥ ಮಾಡ್ಕೊಳ್ಳಿ. ಇವತ್ತು ನಾವೆಲ್ಲಾ ಸೇರಿ ನಮ್ಮ ಹಳೆಯ ತೋಟದ ಮನೆಗೆ ಹೋಗುತ್ತಿದ್ದೇವೆ. ಅಲ್ಲಿ ಮೊಬೈಲ್ ಇಲ್ಲ, ಲ್ಯಾಪ್‌ಟಾಪ್ ಇಲ್ಲ. ಕೇವಲ ನಾವು ಮಾತ್ರ. ಅಂದಳು. ಮುಂದುವರಿದು, ನೋಡು ಕಿರಣ್ ಒಂದು ಕುಟುಂಬದಲ್ಲಿ ಅಮ್ಮ ಅಥವಾ ಹೆಣ್ಣು ಕೇವಲ ಅಡುಗೆ ಮಾಡುವವಳಲ್ಲ, ಅವಳು ಇಡೀ ಮನೆಯನ್ನು ಹಿಡಿದಿಡುವ ʼಅಂಟುʼ ಇದ್ದಂತೆ. ಆ ಅಂಟಿನ ನಂಟಿನ ಗಂಟು ಕಳಚಿಕೊಳ್ಳಬಾರದು. ಎಂದು ಸವಿತ ಹೇಳಿದಳು. ಅವಳು ಹೇಳಿದ ಮಾತುಗಳು ʼಮಳೆಗಾಲದ ನಂತರದ ಬಿಸಿಲಿನಂತೆʼ ಇದ್ದವು. ಕೆಲಸದ ಒತ್ತಡದ ಮಂಜನ್ನು ಅವಳು ತನ್ನ ಪ್ರೀತಿಯ ಆದೇಶದಿಂದ ಸರಿಸಿದಳು. ಹಾಗೆಯೇ ನೋಡಿ ಪ್ರಕಾಶ್ ಫ್ಯಾಮಿಲಿ ಡೇ ಅಂದ್ರೆ, ಕ್ಯಾಲೆಂಡರ್‌ನಲ್ಲಿರೋ ದಿನಾಂಕವಲ್ಲ, ಅದು ನಮ್ಮ ಹೃದಯದಲ್ಲಿರೋ ಪ್ರೀತಿಯನ್ನು ನವೀಕರಿಸುವ ದಿನ ಎಂದು ಅವಳು ಹೇಳಿದಾಗ, ಪ್ರಕಾಶ್ ತಾನು ಕಟ್ಟಿಕೊಂಡಿದ್ದ ʼಕೆಲಸದ ಕೋಟೆʼಯಿಂದ ಹೊರಬರಲೇಬೇಕಾಯಿತು.

ಇವತ್ತು ಹಳೆಯ ತೋಟದ ಮನೆಗೆ ನಮ್ಮ ನೆನಪುಗಳ ಕಣಜಕ್ಕೆ ಹೋಗುತ್ತಿದ್ದೇವೆಂದು ರಾಮನಾಥ್ ಹೇಳಿದರು. ಮಧ್ಯಾಹ್ನದ ಹೊತ್ತಿಗೆ ಎಲ್ಲರೂ ಹಸಿರಿನ ನಡುವಿನ ಹಳೆಯ ತೋಟದ ಮನೆಯಲ್ಲಿದ್ದರು. ನಗರದ ಸಿಮೆಂಟ್ ಕಾಡಿನಿಂದ ಹೊರಬಂದು ಹಸಿರು ತೋಟಕ್ಕೆ ಹೋದಾಗ, ಅಲ್ಲಿನ ಪ್ರತಿಯೊಂದು ಮರವೂ ಒಂದು ಕಥೆ ಹೇಳುವಂತಿತ್ತು. ತೋಟದಲ್ಲಿನ ಹಳೆಯ ತೋಟದ ಮನೆ ಹರಿದು ಹೋದ ಹಳೆಯ ಪುಸ್ತಕವೊಂದಕ್ಕೆ ಹೊಸ ಬೈಂಡಿಂಗ್ ಹಾಕಿದಂತೆ ಕಾಣುತ್ತಿತ್ತು. ನಗರದ ಎಸಿ ಗಾಳಿಗಿಂತ, ಇಲ್ಲಿನ ಮರದ ಕೆಳಗಿನ ಗಾಳಿ ಸಂಬಂಧಗಳನ್ನು ತಂಪುಗೊಳಿಸುತ್ತಿತ್ತು. ಮರದ ಕೆಳಗೆ ಚಾಪೆ ಹಾಸಿ ಕುಳಿತಾಗ ಮಾತುಗಳು ಮಲ್ಲಿಗೆಯಂತೆ ಅರಳಿದವು. ಆಗ ರಾಮನಾಥ್ ಎಲ್ರೂ ಇಲ್ಲಿ ನೋಡಿ, ಈ ಮರಕ್ಕೆ ಬೇರು ಎಷ್ಟು ಆಳವಾಗಿದೆಯೋ, ಅಷ್ಟು ಎತ್ತರಕ್ಕೆ ಅದು ಬೆಳೆದಿದೆ. ಕುಟುಂಬದ ಹಿರಿಯರು ಬೇರುಗಳಿದ್ದಂತೆ; ಅವರು ಕಣ್ಣಿಗೆ ಕಾಣಿಸದೇ ಇರಬಹುದು, ಆದರೆ ಇಡೀ ಮರ ನಿಂತಿರುವುದು ಅವರ ಮೇಲೆಯೇ. ಎಂದರು. ಆಗ ಕಿರಣ್ ಕೇಳಿದ ಅಪ್ಪಾ, ನಿಮ್ಮ ಕಾಲದಲ್ಲಿ ಫ್ಯಾಮಿಲಿ ಅಂದ್ರೆ, ಹೇಗಿತ್ತು. ಆಗ ಪ್ರಕಾಶ್ (ನೆನಪುಗಳ ಲೋಕಕ್ಕೆ ಜಾರುತ್ತಾ) ನಮ್ಮ ಕಾಲದಲ್ಲಿ ಅಂದ್ರೆ, ನಾವು ಚಿಕ್ಕವರಿದ್ದಾಗ ಅಜ್ಜಿ ಕಥೆ ಹೇಳುತ್ತಿದ್ದರು. ಅಮ್ಮ ಕೈ ತುತ್ತು ಕೊಡುತ್ತಿದ್ದಳು. ಜಗಳವಾಡಿದರೂ ರಾತ್ರಿಯಾಗುವಷ್ಟರಲ್ಲಿ ಎಲ್ಲರೂ ಒಟ್ಟಿಗೇ ಊಟಕ್ಕೆ ಕೂರಬೇಕಿತ್ತು. ಅಪ್ಪಾಜಿಯ ಒಂದು ನೋಟದಲ್ಲೇ ಶಿಸ್ತು ಇರುತ್ತಿತ್ತು, ಆದರೆ ಆ ಶಿಸ್ತಿನ ಹಿಂದೆ ಬೆಟ್ಟದಷ್ಟು ಪ್ರೀತಿ ಇತ್ತು. ಎಂದು ಪ್ರಕಾಶ್ ತನ್ನ ಬಾಲ್ಯದ ಕಥೆಗಳನ್ನು ಹೇಳುತ್ತಿದ್ದಾಗ, ಅವನ ಮಾತುಗಳು ʼಒಣಗಿದ ಭೂಮಿಗೆ ಬಿದ್ದ ಮೊದಲ ಮಳೆಯ ಹನಿಗಳಂತೆʼ ಕಿರಣ್‌ನ ಮನಸ್ಸನ್ನು ತಣಿಸಿದವು. ಆಗ ರಾಮನಾಥ್, ನೋಡು ಕಿರಣ್, ಕುಟುಂಬ ಅಂದ್ರೆ ಕೇವಲ ರಕ್ತ ಸಂಬಂಧವಲ್ಲ. ಅದು ಕಷ್ಟ ಬಂದಾಗ ಹೆಗಲು ಕೊಡುವ, ಸುಖ ಬಂದಾಗ ಜೊತೆಯಾಗಿ ನಗುವ ಒಂದು ಸುಭದ್ರವಾದ ಕೋಟೆ. ಇವತ್ತು ನೀನು ದೊಡ್ಡ ಸಾಧನೆ ಮಾಡಿದಾಗ ಚಪ್ಪಾಳೆ ತಟ್ಟಲು ಹೊರಗಿನವರು ಇರಬಹುದು, ಆದರೆ ಸೋತಾಗ ನಿನ್ನನ್ನು ಅಪ್ಪಿಕೊಳ್ಳಲು ನಿನ್ನ ಕುಟುಂಬ ಮಾತ್ರ ಇರುತ್ತದೆ. ಎಂದು ವಿವರಿಸುತ್ತಾ ಮುಂದುವರಿದು, ಕುಟುಂಬವು ತಲೆಮಾರುಗಳ ನಡುವಿನ ಸೇತುವೆ ಎಂಬುದನ್ನು ನಾವು ಮರೆಯಬಾರದು ಎಂದರು.

ಕಿರಣ್ ತನ್ನ ಮೊಬೈಲ್ ಮತ್ತೆ ಲ್ಯಾಪ್ ಟಾಪ್‌ನ್ನು ಪಕ್ಕಕ್ಕಿಟ್ಟು ಅಜ್ಜನ ನೆನಪುಗಳನ್ನು ಕೇಳಲು ಕುಳಿತಾಗ, ಅಲ್ಲಿ ತಲೆಮಾರುಗಳ ನಡುವಿನ ʼಕಂದಕʼ ಮುಚಿ್ಚಹೋಗಿ ʼಸೇತುವೆʼ ನಿರ್ಮಾಣವಾಯಿತು. ಆಗ ಕಿರಣ್ ತನ್ನ ಮನಸ್ಸಿನಲ್ಲಿ ಆನ್‌ಲೈನ್ ಗೇಮ್‌ಗಳಿಗಿಂತ ಅಜ್ಜನ ಅನುಭವದ ಪಾಠಗಳು ಹೆಚ್ಚು ರೋಚಕವೆಂದು ಅವನಿಗೆ ಅನ್ನಿಸತೊಡಗಿತು. ಕೂಡಲೇ ಸವಿತಾ ಮಧ್ಯೆ ಪ್ರವೇಶಿಸಿ ಎಲ್ರೂ, ಕೇಳಿಸಿಕೊಳ್ಳಿ. ಕುಟುಂಬದ ಪ್ರೀತಿ ಅನ್ನೋದು ಬ್ಯಾಂಕ್ ಬ್ಯಾಲೆನ್ಸ್ ಇದ್ದಂತೆ; ನಾವು ಎಷ್ಟು ಸಮಯ ಮತ್ತು ಗೌರವವನ್ನು ಅದರಲ್ಲಿ ಡಿಪಾಸಿಟ್ ಮಾಡುತ್ತೇವೋ, ಅಷ್ಟೇ ಪ್ರೀತಿಯ ಬಡ್ಡಿಯನ್ನು ನಾವು ಸಂಕಷ್ಟದ ಕಾಲದಲ್ಲಿ ಹಿಂಪಡೆಯಬಹುದು. ಎಂದಾಗ ಕಿರಣ್ ಕಣ್ಣರಳಿಸಿ ನೋಡುತ್ತಿದ್ದನು. ಈಗ ಎಲ್ರೂ ಊಟಕ್ಕೆ ಬನ್ನಿ ಮರಗಳ ತಂಪಿನ ತಂಗಾಳಿಯಲ್ಲಿ ಕುಳಿತು ಊಟ ಮಾಡುವುದೇ ಒಂದು ಚೆಂದದ ಅನುಭವ ಎಂದಳು ಸವಿತ. ಮಧ್ಯಾಹ್ನದ ಊಟವನ್ನು ಸವಿದು ಮತ್ತೆ ತೋಟದ ನಡುವೆ ಅಡ್ಡಾಡಲಿಕ್ಕೆ ಹೋದರು. ಅಜ್ಜ ರಾಮನಾಥ್ ತನ್ನ ಹೆಂಡತಿಯೊಂದಿಗೆ ಕಳೆದ ಸವಿಸವಿ ನೆನಪುಗಳನ್ನು ಮೆಲುಕು ಹಾಕಿದರು. ಪ್ರಕಾಶ್ ತನ್ನ ತಾಯಿಯ ಗುಣ ಸ್ವಭಾವದ ಕುರಿತು ಸವಿತಾ ಮತ್ತು ಕಿರಣ್ ಗೆ ವಿವರಿಸಿ ಹೇಳಿದನು. ಇವೆಲ್ಲವನ್ನು ಕೇಳುತ್ತಾ ಇದ್ದ ಹಾಗೆ ಸಮಯ ಕಳೆದದ್ದೆ ಅವರಿಗೆ ಗೊತ್ತಾಗಲಿಲ್ಲ. ಸಂಜೆ ಸೂರ್ಯ ಮುಳುಗುವ ಹೊತ್ತಿಗೆ ಕಿರಣ್‌ಗೆ ತನ್ನ ತಪ್ಪಿನ ಅರಿವಾಯಿತು. ಅವನು ತನ್ನ ಮೊಬೈಲ್ ಪಕ್ಕಕ್ಕಿಟ್ಟು ಅಜ್ಜನ ಕೈ ಹಿಡಿದುಕೊಂಡು ಹೇಳಿದ. ಕ್ಷಮಿಸಿ ಅಜ್ಜಾ. ನಾನು ಇಷ್ಟು ದಿನ ವರ್ಚುವಲ್ ಪ್ರಪಂಚದಲ್ಲೇ ಸುಖ ಕಾಣುತ್ತಿದ್ದೆ. ಆದರೆ ಇವತ್ತು ನಿಮ್ಮ ಜೊತೆ ಕಳೆದ ಈ ಕೆಲವು ಗಂಟೆಗಳು ನನಗೆ ಕೊಟ್ಟ ನೆಮ್ಮದಿ ಬೇರೆಲ್ಲೂ ಸಿಗಲಿಲ್ಲ. ಎಂದ. ಕೂಡಲೇ ಪ್ರಕಾಶ್ ಕೂಡಾ ಸವಿತಾ, ಇವತ್ತು ಈ ಪ್ಲಾನ್ ಮಾಡಿದ್ದಕ್ಕೆ ಧನ್ಯವಾದಗಳು. ಕೆಲಸದ ಒತ್ತಡದಲ್ಲಿ ನಾನು ನನ್ನವರನ್ನೇ ಮರೆತುಬಿಟ್ಟಿದ್ದೆ. ಎಂದಾಗ ಸವಿತ ನೋಡಿ, ಕುಟುಂಬ ಅನ್ನೋದು ಒಂದು ಗಿಡವಿದ್ದಂತೆ ಪ್ರಕಾಶ್. ಅದಕ್ಕೆ ಪ್ರತಿದಿನ ಪ್ರೀತಿ ಮತ್ತು ಸಮಯದ ನೀರು ಹಾಕುತ್ತಿರಬೇಕು. ಆಗಲೇ ಅದು ಸುಂದರವಾಗಿ ಬೆಳೆಯುವುದು.

## ಇತಿಹಾಸದಲ್ಲಿ ಈ ದಿನ

### ಮೇ-15

1610: ಫ್ರಾನ್ಸ್ ರಾಜ ಹೆನ್ರಿ ನಾಲ್ಕನೇವರನ್ನು ಹತ್ಯೆ ಮಾಡಲಾಯಿತು.
1817: ದೇವೇಂದ್ರನಾಥ ಟಾಗೋರ್ ಜನನ.
1940: ಮ್ಯಾಕ್‌ಡೊನಾಲ್ಡ್ ಸಂಸ್ಥೆಯ ಮೊದಲ ರೆಸ್ಟೋರೆಂಟ್ ಆರಂಭವಾಯಿತು.
1948: ಅರಬ್-ಇಸ್ರೇಲ್ ಯುದ್ಧ ಆರಂಭವಾಯಿತು.
1957: ಬ್ರಿಟನ್ ತನ್ನ ಮೊದಲ ಹೈಡ್ರೋಜನ್ ಬಾಂಬ್ ಪರೀಕ್ಷೆ ನಡೆಸಿತು.
1972: ಓಕಿನಾವಾ ಪ್ರದೇಶವನ್ನು ಅಮೆರಿಕ ಜಪಾನ್‌ಗೆ ಹಸ್ತಾಂತರಿಸಿತು.
1988: ಸೋವಿಯತ್ ಸೇನೆ ಅಫ್ಘಾನಿಸ್ತಾನದಿಂದ ಹಿಂಪಡೆಯಲು ಆರಂಭಿಸಿತು.
1993: ಕನ್ನಡದ ನಟ ಡಾ. ರಾಜ್‌ಕುಮಾರ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಿಸಲಾಯಿತು.
2008: ಕ್ಯಾಲಿಫೋರ್ನಿಯಾದಲ್ಲಿ ಸಮಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಲಾಯಿತು.
2022: ಶ್ರೀಲಂಕಾದ ಆರ್ಥಿಕ ಬಿಕ್ಕಟ್ಟು ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಚರ್ಚೆಗೆ ಕಾರಣವಾಯಿತು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248